| | | | | |
|---|---|---|---|---|
| | | 216 | ದೇವದುರ್ಗ | 5 |
| | | 217 | ಮಾನ್ವಿ | 2 |
| | | 218 | ಸಿಂಧನೂರು | 1 |
| | | 219 | ಮಸ್ಕಿ | 2 |
| **29** | **ಕೊಪ್ಪಳ** | 220 | ಗಂಗಾವತಿ | 2 |
| | | 221 | ಕನಕಗಿರಿ | 1 |
| | | 222 | ಕುಷ್ಟಗಿ | 2 |
| | | 223 | ಯಲಬುರ್ಗಾ | 5 |
| | | 224 | ಕೊಪ್ಪಳ | 2 |
| | | | **ಒಟ್ಟು** | **385** |

**ಕರ್ನಾಟಕ ವಿಧಾನ ಸಭೆ**

**368 ಶ್ರೀ.ಸಿದ್ದು ಸವದಿ (ತೆರದಾಳ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**

**ಅ)** ಪಿ.ಹೆಚ್.ಸಿ. ಮತ್ತು ಸಿ.ಹೆಚ್.ಸಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಇರುವ ನಿಯಾಮವಳಿಗಳೇನು?

ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಬಯಲು ಪ್ರದೇಶಗಳಲ್ಲಿ 30 ಸಾವಿರ ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 20 ಸಾವಿರ ಜನಸಂಖ್ಯೆಗೆ ಒಂದರಂತೆ ಸ್ಥಾಪಿಸಲು ಅವಕಾಶವಿದೆ. ಹಾಗೆಯೇ ಬಯಲು ಪ್ರದೇಶಗಳಲ್ಲಿ 1.20.000 ಜನಸಂಖ್ಯೆಗೆ ಒಂದರಂತೆ ಹಾಗೂ ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ 80 ಸಾವಿರ ಜನಸಂಖ್ಯೆಗೆ ಒಂದರಂತೆ ಸಮುದಾಯ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅವಕಾಶವಿದೆ.

**ಆ)** 2006–07ರಿಂದ ಇಲ್ಲಿಯವರೆಗೆ ಮೇಲ್ದರ್ಜೆಗೇರಿಸಲಾದ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು)?

2006–07 ರಲ್ಲಿ 65 ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 2007–08 ರಲ್ಲಿ 516 ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಮತ್ತು 26 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) ತೇರದಾಳ ಮತ ಕ್ಷೇತ್ರದ ತೇರದಾಳ ಪಿ.ಹೆಚ್.ಸಿ. ಮಹಾಲಿಂಗಪೂರ ಮತ್ತು ಬನಹಟ್ಟಿಯಲ್ಲಿರುವ ಸಿ.ಹೆಚ್.ಸಿ.ಗಳನ್ನು ಮೇಲ್ದರ್ಜೆಗೇರಿಸಲು ಕೈಗೊಂಡಿರುವ ಕ್ರಮವೇನು?

ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಈ ಕ್ಷೇತ್ರದ ದೊಡ್ಡ ಗ್ರಾಮಗಳಲ್ಲಿ ಪಿ.ಹೆಚ್.ಸಿ ಗಳನ್ನು ಪ್ರಾರಂಭಿಸುವ ಬೇಡಿಕೆ ಇದ್ದು, ಈ ಬಗ್ಗೆ ಕೈಗೊಳ್ಳಲಿರುವ ಕ್ರಮವೇನು?

ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿ ಈಗಾಗಲೇ ನಿಗಧಿತ ಸಂಖ್ಯೆಗಿಂತ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ:ಆಕುಕ 133 ಸಿಜಿಎಂ 2009**

(ಬಿ. ಶ್ರೀರಾಮುಲು)
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.**

## ವಿಧಾನ ಸಭೆ

**370 ಶ್ರೀ ಹೆಚ್.ಡಿ. ರೇವಣ್ಣ**
**ಸಮಾಜ ಕಲ್ಯಾಣ ಸಚಿವರು.**

ಅ) ಹಾಸನ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳೆಷ್ಟು? ಈ ಶಾಲೆಗಳಲ್ಲಿರುವ ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ಸಂಖ್ಯೆ ಎಷ್ಟು;

ಹಾಸನ ಜಿಲ್ಲೆಯಲ್ಲಿ ಒಟ್ಟು 21 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು ಅವುಗಳಲ್ಲಿನ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

| 2008–09ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ವಿವರ. | | | | | | | |
|---|---|---|---|---|---|---|---|
| ವಸತಿ ಶಾಲೆಯ ವರ್ಗ | ವಸತಿ ಶಾಲೆಗಳ ಸಂಖ್ಯೆ | ಪ. ಜಾತಿ | ಪ. ವರ್ಗ | ಹಿಂ. ವರ್ಗ | ಅಲ್ಪ ಸಂ. | ಸಾಮಾನ್ಯ | ಒಟ್ಟು |
| ಪ.ಜಾತಿ | 5 | 363 | 7 | – | – | 260 | 630 |
| ಶಿಕ್ಷಣ | 1 | 145 | 2 | – | – | 51 | 198 |

| ಇಲಾಖೆಯಿಂದ ವರ್ಗಾವಣೆ | | | | | | | |
|---|---|---|---|---|---|---|---|
| ಹಿ.ವರ್ಗ | 12 | 329 | 44 | 1277 | – | – | 1650 |
| ಅಲ್ಪ ಸಂಖ್ಯಾತರ | 3 | 27 | 25 | 51 | 297 | – | 400 |
| **ಒಟ್ಟು** | **21** | **864** | **78** | **1328** | **297** | **311** | **2878** |

ಆ) ಸರ್ಕಾರಿ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು ಹಾಗೂ ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ಶಾಲೆಗಳೆಷ್ಟು; ಪ್ರತಿ ತಿಂಗಳು ಖಾಸಗಿ ಕಟ್ಟಡಗಳಿಗೆ ಕಟ್ಟುತ್ತಿರುವ ಬಾಡಿಗೆ ಎಷ್ಟು (ಮಾಹಿತಿ ನೀಡುವುದು);

ಆ ಸಂಬಂಧದ ವಿವರ ಈ ಕೆಳಗಿನಂತಿದೆ:–

| ವಸತಿ ಶಾಲೆಯ ವರ್ಗ | ವಸತಿ ಶಾಲೆಗಳ ಸಂಖ್ಯೆ | ಸ್ವಂತ ಕಟ್ಟಡದಲ್ಲಿರುವ ವಸತಿ ಶಾಲೆಗಳ ಸಂಖ್ಯೆ | ಬಾಡಿಗೆ ರಹಿತ ವಸತಿ ಶಾಲೆಗಳ ಸಂಖ್ಯೆ | ಬಾಡಿಗೆ ಕಟ್ಟಡದಲ್ಲಿರುವ ವಸತಿ ಶಾಲೆಗಳ ಸಂಖ್ಯೆ: | ಬಾಡಿಗೆ ವಿವರ |
|---|---|---|---|---|---|
| ಪ.ಜಾತಿ | 5 | 1 | 1 | 3 | ಒಂದು ವಸತಿ ಶಾಲೆಗೆ ಮಾಸಿಕ ಬಾಡಿಗೆ ರೂ.18,000–00 ನಿಗಧಿಪಡಿಸಲಾಗಿದ್ದು ಎರಡು ಕಟ್ಟಡಗಳಿಗೆ ಬಾಡಿಗೆ ನಿಗಧಿ ಪಡಿಸಲಾಗುತ್ತಿದೆ. |
| ಶಿಕ್ಷಣ ಇಲಾಖೆಯಿಂದ ವರ್ಗಾವಣೆ | 1 | 1 | 0 | 0 | – |
| ಹಿಂ.ವರ್ಗ | 12 | 2 | 3 | 7 | ನಾಲ್ಕು ವಸತಿ ಶಾಲೆಗಳ ಬಾಡಿಗೆ ಕಟ್ಟಡಗಳಿಗೆ ಮಾಸಿಕ ಬಾಡಿಗೆ ರೂ.61,020–00 ಪಾವತಿಸಲಾಗುತ್ತಿದ್ದು ಉಳಿದ ಮೂರು ವಸತಿ ಶಾಲೆಗಳ ಬಾಡಿಗೆ ಕಟ್ಟಡಗಳಿಗೆ ಬಾಡಿಗೆ ನಿಗಧಿಪಡಿಸಲಾಗುತ್ತಿದೆ. |
| ಅಲ್ಪಸಂಖ್ಯಾತರ | 3 | – | 1 | 2 | ಎರಡು ಬಾಡಿಗೆ ಕಟ್ಟಡಗಳಿಗೆ ಮಾಸಿಕ ರೂ.28,516–00 ಪಾವತಿಸಲಾಗುತ್ತಿದೆ. |
| ಒಟ್ಟು | **21** | **4** | **5** | **12** | |